ಕರ್ನಾಟಕ ವಿಧಾನ ಪರಿಷತ್ತು
154ನೇ ಅಧಿವೇಶನ

1. ಸದಸ್ಯರ ಹೆಸರು : ಶ್ರೀಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ)
2. ಚುಕ್ಕೆ ಗುರುತಿಲ್ಲದ ಪ್ರಶ್ನೆ : 1025
3. ಉತ್ತರಿಸಬೇಕಾದ ದಿನಾಂಕ : 18.12.2024
4. ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಆನೆಗುಂದಿ ಹಂಪಿ ಮಧ್ಯದಲ್ಲಿ ಸರ್ಕಾರವು ತೂಗು ಸೇತುವೆಯನ್ನು ನಿರ್ಮಾಣ ಮಾಡಲು ಬಿಡುಗಡೆ ಮಾಡಿದ ಮೊತ್ತವೆಷ್ಟು. | ಈ ಸೇತುವೆ ಕಾಮಗಾರಿಯನ್ನು ನಬಾರ್ಡ್‌ನ ಆರ್‌ಐಡಿಎಫ್-2 (1996-97) ಯೋಜನೆಯಡಿ ರೂ. 412.00 ಲಕ್ಷ ಮೊತ್ತದಲ್ಲಿ ಕೈಗೊಳ್ಳಲಾಗಿದ್ದು, ರೂ.485 ಲಕ್ಷ ವೆಚ್ಚವಾಗಿರುತ್ತದೆ. |
| ಆ | ಈ ಕಾಮಗಾರಿಯನ್ನು ನಿರ್ಮಾಣ ಮಾಡಲು ನೀಡಿರುವ ಕಾಮಗಾರಿಯು ದಿನಾಂಕ: 22.01.2019ರಂದು ಕಾಮಗಾರಿಯ ಹಂತದಲ್ಲಿ ಕುಸಿದು ಬಿದ್ದು, ಇದರಲ್ಲಿ ಎಷ್ಟು ಜನ ಕಾರ್ಮಿಕರು ಮೃತಪಟ್ಟಿರುತ್ತಾರೆ: ಹಾಗೂ ಗಾಯಗೊಂಡಿರುತ್ತಾರೆ. | ಈ ಅವಘಡದಲ್ಲಿ ಒಟ್ಟು8 ಜನ ಕಾರ್ಮಿಕರು ಮೃತಪಟ್ಟಿರುತ್ತಾರೆ ಹಾಗೂ 41 ಕಾರ್ಮಿಕರು ಗಾಯಗೊಂಡಿರುತ್ತಾರೆ. |
| ಇ | ಈ ಕಾಮಗಾರಿಯ ಗುತ್ತಿಗೆದಾರರು ಯಾರು: ಸದರಿ ಸೇತುವೆಯ ಕಳಪೆ ಕಾಮಗಾರಿಯಿಂದಾಗಿ ಸೇತುವೆ ಕುಸಿದು ಬಿದ್ದರುವುದು ನಿಜವೇ: ಈ ಘಟನೆಯಲ್ಲಿ ಮೃತಪಟ್ಟ ಹಾಗೂ ಗಾಯಗೊಂಡ ಕಾರ್ಮಿಕರಿಗೆ ಯಾವ ರೀತಿಯಲ್ಲಿ ಪರಿಹಾರ ನೀಡಲಾಗಿದೆ: ಇದಕ್ಕೆ ಕಾರಣಕರ್ತರಾದ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ? (ಸಂಪೂರ್ಣ ಮಾಹಿತಿ ನೀಡುವುದು) | ಸಂಪೂರ್ಣ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |

ಲೋಇ 67 ಆರ್.ಡಿಎಫ್ 2024

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

## ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1025

## ಅನುಬಂಧ

- ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಆನೆಗೊಂದಿ ಹತ್ತಿರ ತುಂಗಭದ್ರ ನದಿಗೆ ಅಡ್ಡಲಾಗಿ ತೂಗು ಸೇತುವೆ ನಿರ್ಮಾಣ ಕಾಮಗಾರಿಗೆ ನವೆಂಬರ್-1993ರಲ್ಲಿ ಶಂಕುಸ್ಥಾಪನೆ ಮಾಡಲಾಯಿತು.
- ಈ ಸೇತುವೆ ನಿರ್ಮಾಣದಿಂದ ಗಂಗಾವತಿ ಮತ್ತು ಹೊಸಪೇಟೆ ತಾಲ್ಲೂಕು ಸಂಪರ್ಕ ಅತ್ಯಂತ ಸಮೀಪವಾಗುವುದರಿಂದ ಈ ಸೇತುವೆಯನ್ನು ನಬಾರ್ಡ್ ಸಾಲ ಸಹಾಯದ ಆರ್‌ಐಡಿಎಫ್-2 (1996-97) ಯೋಜನೆಯಡಿ ರೂ. 4.12 ಕೋಟಿ ಮೊತ್ತದಲ್ಲಿಅನುಮೋದನೆ ಪಡೆಯಲಾಯಿತು.
- ಈ ಸೇತುವೆ ನಿರ್ಮಾಣದ ಸ್ಥಳದಲ್ಲಿ ನದಿಯ ಪಾತ್ರದ ಆಳವು 18.00 ಮೀಟರ್ ಇರುವುದರಿಂದ ಈ ಭಾಗದಲ್ಲಿ ತೂಗು ಸೇತುವೆ (160 ಮೀ) ಮತ್ತು ದಂಡೆಯ ಕಡೆ 66 ಮೀಟರ್ ಡೆಕ್ ಸ್ಲಾಬ್ ಸೇತುವೆ ಯೋಜಿಸಲಾಯಿತು. (Composite cable stayed bridge)
- ಈ ಕಾಮಗಾರಿಯನ್ನು ಗುತ್ತಿಗೆ ಮೂಲಕ ಹೈದ್ರಾಬಾದ್ ಮೂಲದ ಶ್ರೀ. ಬಿ.ವಿ. ಸುಬ್ಬಾರೆಡ್ಡಿ ಅಂಡ್ ಸನ್ಸ್ ಇವರಿಗೆ ಸ್ವಂತ ವಿನ್ಯಾಸದ ಆಧಾರದಲ್ಲಿನೀಡಿದ್ದು, ಕಾಮಗಾರಿಯನ್ನು ದಿನಾಂಕ 15-04-1997 ರಲ್ಲಿ ಪ್ರಾರಂಭಿಸಲಾಯಿತು.
- ಕಾಮಗಾರಿಯು ಪ್ರಗತಿಯಲ್ಲಿದ್ದಾಗ ಯುನೆಸ್ಕೋ ತಂಡವು 1999ರಲ್ಲಿ ಭೇಟಿ ನೀಡಿದಾಗ ಸೇತುವೆ ನಿರ್ಮಾಣವನ್ನು ವಿರೋಧಿಸಿ ಹಂಪಿ ವಿಶ್ವ ಪರಂಪರೆ ಪ್ರದೇಶವನ್ನು Endangered World Heritage site ಎಂದು ಪರಿಗಣಿಸಿ ಸೇತುವೆ ನಿರ್ಮಾಣವನ್ನು ಸ್ಥಗಿತಗೊಳಿಸಲು ಸೂಚಿಸಿತು.
- ಈ ಸೇತುವೆ ಸ್ಥಳವನ್ನು ಅಂದಿನ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಜುಲೈ-2000ರಲ್ಲಿ ಭೇಟಿ ನೀಡಿದಾಗ ನೀಡಿದ ಸೂಚನೆಯಂತೆ ಕಾಮಗಾರಿಯನ್ನು ಯಥಾಸ್ಥಿತಿಯಲ್ಲಿ ಸ್ಥಗಿತಗೊಳಿಸಲಾಯಿತು.
- ಈ ಹಂತದಲ್ಲಿ 66 ಮೀಟರ್ ಡೆಕ್‌ಸ್ಲಾಬ್ ಮತ್ತು 136 ಮೀಟರ್ ಕೇಬಲ್ ಸೇತುವೆ ನಿರ್ಮಾಣ ಪೂರ್ಣಗೊಂಡಿದ್ದು, ಮಧ್ಯಭಾಗದ 24 ಮೀಟರ್ ಕಾಮಗಾರಿ ಬಾಕಿ ಉಳಿದಿರುತ್ತದೆ. ರೂ. 4.85 ಕೋಟಿ ವೆಚ್ಚವಾಗಿರುತ್ತದೆ.
- ನಂತರ ಯುನೆಸ್ಕೋ ತಂಡವು ಈ ಸ್ಥಳವನ್ನು ಡಿಸೆಂಬರ್-2001ರಲ್ಲಿ ಭೇಟಿ ನೀಡಿದಾಗ ಅಪೂರ್ಣ ಸೇತುವೆ ಪ್ರಾರಂಭಿಸುವ ಮೊದಲು ಸೇತುವೆಗೆ ಹೊಸ ಕೂಡು ರಸ್ತೆ ನಿರ್ಮಿಸಲು ಹಾಗೂ ಸೇತುವೆಯ ಮೇಲೆ ಭಾರಿ ವಾಹನಗಳ ಸಂಚಾರ ನಿಷೇಧಿಸುವಂತೆ ಸಲಹೆ ನೀಡಿತು.
- ಅದರಂತೆ ಪರ್ಯಾಯ ರಸ್ತೆ ನಿರ್ಮಾಣವನ್ನು 2003ರಲ್ಲಿ ರೂ. 4.95 ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸಲಾಯಿತು.
- ರಾಜ್ಯ ಸರ್ಕಾರದ ಒತ್ತಾಯ ಹಾಗೂ ಕೇಂದ್ರ ಸರ್ಕಾರದ ಮಧ್ಯಸ್ಥಿಕೆಯಿಂದ ದಿನಾಂಕ:06-09-2005ರಂದು ಯುನೆಸ್ಕೋ ತಂಡದವರು ಭಾರತೀಯ ಪುರಾತತ್ವ ಸರ್ವೇ ಇಲಾಖೆಗೆ ಪತ್ರ ಬರೆದು ಸ್ಥಳೀಯ ಜನರ ಅವಶ್ಯಕತೆ ಪರಿಗಣಿಸಿ ಸೇತುವೆಯನ್ನುಪುನರ್ ಪ್ರಾರಂಭಿಸಿ 1 ವರ್ಷದೊಳಗೆಪೂರ್ಣಗೊಳಿಸಲು ಸೂಚಿಸಿರುತ್ತಾರೆ.
- ಬಾಕಿ ಉಳಿದ ಸೇತುವೆ ನಿರ್ಮಾಣ ಹಾಗೂ ಹಳೆಯ ಕೇಬಲ್ ಬದಲಾವಣೆ ಹಾಗೂ ಇನ್ನಿತರೆ ಅಂಶಗಳನ್ನು ಒಳಗೊಂಡಂತೆ ಕಾಮಗಾರಿಯನ್ನು **turn-key** ಆಧಾರದ ಮೇಲೆ ಕೈಗೊಳ್ಳಲು ಗುತ್ತಿಗೆ ಆಹ್ವಾನಿಸಲಾಯಿತು.
    - **TURN KEY BASIS**
    - Construction of 24.0m span of Bridge (Balance length).
    - Approach Roads to Bridge on Both Side(Anegundi Side &Hampi Side)
    - Retaining walls for Approach roads both side, Construction of drains, CD's
    - Providing hand Rails, footpath, wearing coat for entire length of Bridge.(Total length 226.0m).
    - Stressing high tensile cables, Second Stage stressing cables.
    - Negative aesthetic view of bridge (camouflaging concrete surface).
    - Testing & proof checking by experts & consultants & any other allied works.

- ಈ ಕಾಮಗಾರಿಯನ್ನು turn-key ಆಧಾರದಲ್ಲಿ ಕೈಗೊಳ್ಳಲು ಮೆ. ಬಿ.ವಿ.ರೆಡ್ಡಿ ಅಂಡ್ ಕಂಪನಿ, ಹೈದ್ರಾಬಾದ್ ಇವರಿಗೆ **ರೂ. 6.62 ಕೋಟಿಗೆ** ವಹಿಸಲಾಯಿತು.
- ಗುತ್ತಿಗೆ ಕರಾರಿನಂತೆ ಗುತ್ತಿಗೆದಾರರು ಈ ಕಾಮಗಾರಿಗೆ ಬೇಕಾದ ತಾಂತ್ರಿಕ ವಿನ್ಯಾಸ, ನಕ್ಷೆ, ಅನುಷ್ಠಾನ ಯೋಜನೆ ಇವುಗಳನ್ನು ನುರಿತ ತಜ್ಞ ರಿಂದ ತಯಾರಿಸಿ, ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದುಕೊಂಡು ಕೆಲಸ ಪ್ರಾರಂಭಿಸುವುದು ಹಾಗೂ ಕಾಮಗಾರಿಯನ್ನು ಪೂರ್ಣಗೊಳಿಸಿ ಇಲಾಖೆಗೆ ಹಸ್ತಾಂತರಿಸುವವರೆಗೆ ಗುತ್ತಿಗೆದಾರರ ಜವಾಬ್ದಾರಿಯಾಗಿದೆ.
- ಆದರೆ ಗುತ್ತಿಗೆದಾರರು ಒಡಂಬಡಿಕೆಯ ಷರತ್ತುಗಳನ್ನು ಪಾಲಿಸದೇ ಕಾಮಗಾರಿಗೆ ಬೇಕಾಗಿರುವ ಅವಶ್ಯ ವಿನ್ಯಾಸ, ನಕ್ಷೆ, ಇವುಗಳನ್ನು ಸಲ್ಲಿಸಿ, ಇಲಾಖೆಯ ಅನುಮೋದನೆ ಪಡೆಯದೇ ಮೌಖಿಕ ಹಾಗೂ ಲಿಖಿತ ಆದೇಶಗಳನ್ನು ಉಲ್ಲಂಘಿಸಿ ಸೇತುವೆಯ ಮಧ್ಯಭಾಗದ **24 ಮೀಟರ್ ಅಂಕಣ** ನಿರ್ಮಿಸಲು ಮುಂದಾಗಿದ್ದು, ದಿನಾಂಕ:22-01-2009ರಂದು ಕಾಂಕ್ರೀಟ್ ಹಾಕುವ ಸಮಯದಲ್ಲಿ ಸೇತುವೆಯು ಕುಸಿದಿರುತ್ತದೆ.
- ಈ ಪ್ರಕರಣದ ಬಗ್ಗೆ ತನಿಖೆ ನಡೆಸಲು **ಶ್ರೀ ಡಾ.ಸಿ.ಎಸ್.ವಿಶ್ವನಾಥ್** ಇವರ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ರಚಿಸಲಾಯಿತು.
- ಈ ಟಾಸ್ಕ್ ಫೋರ್ಸ್ ವರದಿಯಲ್ಲಿ "A detailed discussion of all findings has clearly demonstrated that the collapse was essentially due to non-replacement of corroded high tensile steel strands/cables, before recommencing of construction by the new construction agency during Dec-2008. The collapse has rendered the present incomplete cable stayed bridge unfit for any usage. In a nutshell, it calls for total reconstruction of a bridge across the river, at the same or any nearby location.ಅಭಿಪ್ರಾಯನೀಡಿರುತ್ತಾರೆ.
- ಈ ಕಾಮಗಾರಿಯ ಉಸ್ತುವಾರಿಯ ಅಧಿಕಾರಿಗಳಾದ ಶ್ರೀ. ಎಸ್.ಕೆ.ಪಾಟೀಲ್, ಕಾರ್ಯನಿರ್ವಾಹಕ ಇಂಜನಿಯರ್, ಶ್ರೀ.ಎನ್.ಎಸ್.ಗೋಟೂರ, ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ ಹಾಗೂ ಶ್ರೀ.ಆರ್ .ಕೆ.ಮಠದ, ಸಹಾಯಕ ಇಂಜನಿಯರ್ ಇವರುಗಳನ್ನು ಕರ್ತವ್ಯ ಲೋಪದ ಕಾರಣಕ್ಕಾಗಿ ಅಮಾನತ್ತುಗೊಳಿಸಲಾಗಿತ್ತು
- ಮಾನ್ಯ ನಿವೃತ್ತ ನ್ಯಾಯಾಧೀಶರಾದ **ಶ್ರೀ.ಬಿ.ಎಲ್.ಶ್ರೀಕಂಠಯ್ಯ** ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸಲಾಯಿತು.
- ಇವರು ನಡೆದಿರುವ ವಿಚಾರಣೆಯ ವರದಿಯನ್ನಾಧರಿಸಿ ಅಧಿಕಾರಿಗಳ ವಿರುದ್ಧ ಮಾಡಲಾದ ಆರೋಪಗಳು ಸಾಭಿತಾಗದ ಹಿನ್ನೆಲೆಯಲ್ಲಿ ಅವರುಗಳನ್ನು **ದೋಷಮುಕ್ತಗೊಳಿಸಿ ಹಾಗೂ ಅವರ ಅಮಾನತ್ತನ್ನು ಹಿಂಪಡೆಯಲಾಗಿದೆ.**
- ಈ ಘಟನೆಯಿಂದ ಲೋಕೋಪಯೋಗಿ ಇಲಾಖೆಗೆ ಗುತ್ತಿಗೆದಾರರ ಬೇಜವಾಬ್ದಾರಿಯಿಂದ ಆದ ನಷ್ಟದ ಒಟ್ಟು ಮೊತ್ತ ರೂ.5.95 ಕೋಟಿ (ಈ ದುರ್ಘಟನೆಯಲ್ಲಿ 8 ಜನ ಕಾರ್ಮಿಕರು ಮರಣ ಹೊಂದಿದ್ದು, 41 ಜನರು ಗಾಯ ಗೊಂಡಿರುತ್ತಾರೆ ಈ ಎಲ್ಲ ಅನಾಹುತಗಳಿಗಾಗಿ ಗುತ್ತಿಗೆದಾರರ ಹೊಣೆಗಾರರಾಗಿರುತ್ತಾರೆ.
- ಕೆ.ಎಸ್.ಹೆಚ್.ಆರ್.ಸಿ. ಬೆಂಗಳೂರು ಇವರ ಆದೇಶ ಪ್ರಕಾರ (8 ಜನ ಮರಣ ಹೊಂದಿದವರಿಗೆ ಒಟ್ಟು ಪರಿಹಾರ ಮೊತ್ತ ರೂ.40.00 ಲಕ್ಷ ಮತ್ತು 41 ಜನ ಗಾಯಗೊಂಡವರಿಗೆ ಪರಿಹಾರ ಮೊತ್ತ ರೂ.10.25 ಲಕ್ಷಗಳು) **ಒಟ್ಟು ರೂ.50.25 ಲಕ್ಷಗಳ** ಪರಿಹಾರ ಮೊತ್ತವನ್ನು ಸರ್ಕಾರದಿಂದ ವಿತರಿಸಲಾಗಿದೆ.
- ಸರ್ಕಾರದ ಪತ್ರ ಸಂಖ್ಯೆ ಲೋಇ 127 ಐಎಫ್ಎ 2010 ದಿನಾಂಕ 12-07-2010ರಂತೆ ಗುತ್ತಿಗೆದಾರರ ಬೇಜವಾಬ್ದಾರಿಯಿಂದ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಗುತ್ತಿಗೆದಾರರಿಂದ ತುಂಬಿಸಿಕೊಳ್ಳಲು ಎಲ್ಲ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.
- ಅದರನ್ವಯ ದಿನಾಂಕ 22-12-2010ರ ಮೂಲಕ ಕಂದಾಯ ವಸೂಲಿಯೆಂದು ಪರಿಗಣಿಸಲು ಅವರ ಆಸ್ತಿಯ ವಿವರ ನೀಡಲು ಸಬ್ ರಿಜಾಸ್ಟ್ರಾರ್, ಹೈದ್ರಾಬಾದ್ ಇವರನ್ನು ಸಂಪರ್ಕಿಸಲು ಸದರಿಯವರ ಹೆಸರಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲವೆಂದು ಕೇವಲ ರೂ. 3.86 ಲಕ್ಷ ಬೆಲೆಯಪ್ಲಾಟ್ ಇರುವುದಾಗಿ ವರದಿ ಮಾಡಿರುತ್ತಾರೆ.

- ಆದರೆ, ಗುತ್ತಿಗೆದಾರರು ಸರ್ಕಾರದ ವಿರುದ್ಧ ಮಾನ್ಯ ಗಂಗಾವತಿ ಸೀನಿಯರ್ ಸಿವಿಲ್ ಜಡ್ಜ್, ನ್ಯಾಯಾಲಯದಲ್ಲಿ ಇಲಾಖೆಯ ವಿರುದ್ಧ ದಿನಾಂಕ 18-01-2012ರಂದು ಒಟ್ಟು **ರೂ.7.00 ಕೋಟಿ** ಪರಿಹಾರ ಕೋರಿ ಓಎಸ್ ಸಂಖ್ಯೆ 6/2012ರಲ್ಲಿ ಪ್ರಕರಣ ದಾಖಲಿಸಿರುತ್ತಾರೆ.
- ಈ ಪ್ರಕರಣವನ್ನು ಮಾನ್ಯಸೀನಿಯರ್ ಸಿವಿಲ್ ಜಡ್ಜ್, ಗಂಗಾವತಿ ಇವರು ವಾಣಿಜ್ಯ ನ್ಯಾಯಾಲಯಕ್ಕೆ ವರ್ಗಾಯಿಸಿದ್ದು, ಅದರಂತೆ ಓಎಸ್ ಸಂಖ್ಯೆ 6/2012 ಪ್ರಕರಣವು Com OS 02/2020 ಆಗಿಪರಿವರ್ತಿನೆಯಾಗಿದೆ.
- ಮಾನ್ಯ ಕೊಪ್ಪಳ ಜಿಲ್ಲಾ ನ್ಯಾಯಾಲದಲ್ಲಿ Com OS 02/2020 ಪ್ರಕರಣದಲ್ಲಿ ದಿನಾಂಕ 20-02-2021ರಲ್ಲಿ ತೀರ್ಪು ಪ್ರಕಟಿಸಿದ್ದು, ಅದರಂತೆ ಗುತ್ತಿಗೆದಾರರಿಗೆ ರೂ. 5.64 ಕೋಟಿ ಮೊತ್ತ ಪರಿಹಾರ + ಶೇ18% ಬಡ್ಡಿ (from the date of suit till realization of entire amount. It is order to deposit the amount within 3 months from the date of judgement) ಆದೇಶ ನೀಡಲಾಗಿದೆ.
- ಈ ಆದೇಶದ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯ ಪೀಠ, ಧಾರವಾಡ ಇಲ್ಲಿ RFA100018/21ರನ್ವಯ ಮೇಲ್ಮನವಿ ಸಲ್ಲಿಸಲಾಯಿತು.
- ಗುತ್ತಿಗೆದಾರರು ಪುನ: ಮಾನ್ಯ ಕೊಪ್ಪಳ ಜಿಲ್ಲಾ ನ್ಯಾಯಾಲಯಕ್ಕೆ CRP No.1/2021ರಂತೆ ಅರ್ಜಿ ಸಲ್ಲಿಸಿದ ಹಿನ್ನೆಲೆಯಲ್ಲಿ ಮಾನ್ಯ ನ್ಯಾಯಾಧೀಶರು ದಿನಾಂಕ 20-02-2021ರಲ್ಲಿ ನೀಡಿದ್ದರೂ. 5.64 ಕೋಟಿ ಮೊತ್ತದ ಪರಿಹಾರವನ್ನು ರೂ.7.00 ಕೋಟಿಗೆ +ಶೇ24% ಬಡ್ಡಿ (from the date of cause of action for the suit till realization) ಎಂದು ಪರಿಷ್ಕೃತ ತೀರ್ಪು ಪ್ರಕಟಿಸಲಾಗಿದೆ.
- ಮಾನ್ಯ ಕೊಪ್ಪಳ ಜಿಲ್ಲಾ ನ್ಯಾಯಾಲದ ಪರಿಷ್ಕೃತ ತೀರ್ಪಿನ ವಿರುದ್ಧ ಸಹ ಮಾನ್ಯ ಉಚ್ಛ ನ್ಯಾಯಾಲಯ ಪೀಠ, ಧಾರವಾಡ ಇಲ್ಲಿ Comap FR No 100019/2021ರಲ್ಲಿ ದಿನಾಂಕ 01-10-2021ರಂದು ಮೇಲ್ಮನವಿ ಸಲ್ಲಿಸಲಾಗಿದೆ.
- ಈ ಪ್ರಕರಣಗಳು ವಿಚಾರಣೆ ಹಂತದಲ್ಲಿರುತ್ತವೆ.
- ಆನೆಗೊಂದಿ ಹತ್ತಿರ ನಿರ್ಮಾಣದ ಹಂತದಲ್ಲಿದ್ದ ಕೇಬಲ್ ಸೇತುವೆಯು ದಿನಾಂಕ 22-01-2009ರಂದು ಕುಸಿದಿದ್ದು, ಈ ಘಟನೆಯಲ್ಲಿ ಒಟ್ಟು 8 ಜನ ಕಾರ್ಮಿಕರು ಮೃತ ಪಟ್ಟಿರುತ್ತಾರೆ ಹಾಗೂ 41 ಜನ ಕಾರ್ಮಿಕರು ಗಾಯಗೊಂಡಿದ್ದು ಅದರಂತೆ ಗುತ್ತಿಗೆದಾರನ ವಿರುದ್ಧ ಈ ಘಟನೆಗೆ ಸಂಬಂಧಿಸಿದಂತೆ ಗಂಗಾವತಿ ಗ್ರಾಮೀಣ ಪೋಲೀಸ್ ಠಾಣೆಯಲ್ಲಿ **ಗುನ್ನೆ ಸಂಖ್ಯೆ 15/2009ರಡಿ** ಪ್ರಕರಣವನ್ನು ಐಪಿಸಿ ಸೆಕ್ಷನ್ 336, 337, 338, 427, 304ಎ, 114, 119 ಅಡಿಯಲ್ಲಿ ದಾಖಲಿ ಸಲಾಗಿರುತ್ತದೆ.
- ಮಾನ್ಯ ನ್ಯಾಯಾಲಯವು (Principal Civil Judge and JMFC, Gangavathi) **ಸಿಸಿ ಸಂಖ್ಯೆ 690/2013ರಲ್ಲಿ** ಪ್ರಕರಣದ ವಿಚಾರಣೆ ನಡೆಸಿ ಆರೋಪಿತರ ಮೇಲೆ ಸಾಕ್ಷ್ಯಾಧಾರಗಳಿಂದ ಆರೋಪವು ದೃಢಪಟ್ಟಿರುವ ಹಿನ್ನೆಲೆಯಲ್ಲಿ **ಆರೋಪಿ-1 ಶ್ರೀಬಿ.ವಿ. ರೆಡ್ಡಿ ತಂದೆ ರವಿರೆಡ್ಡಿ**, ಆರೋಪಿ-3 ಪ್ರತಾಪ್ ರೆಡ್ಡಿ ಇವರಿಗೆ ಶಿಕ್ಷೆಯ ಪ್ರಮಾಣ ಪ್ರಕಟಿಸಿರುತ್ತದೆ. ಇನ್ನುಳಿದ ಆರೋಪಿ-2 ಶ್ರೀ ರಾಮಕುಮಾರ್ ರಾಜು-ಸಮಾಲೋಚಕರು ಇವರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣವನ್ನು ರದ್ದು ಪಡಿಸಿಕೊಂಡಿರುತ್ತಾರೆ.

- ಈ ತೀರ್ಪನ್ನು ಪ್ರಶ್ನಿಸಿ ಆರೋಪಿತರು ಮಾನ್ಯ ಹೆಚ್ಚುವರಿ ಜಿಲ್ಲಾ ಹೆಚ್ಚುವರಿ ಜಿಲ್ಲಾ ಮತ್ತು ಸತ್ರನ್ಯಾಯಾಲಯ, ಕೊಪ್ಪಳ (ಗಂಗಾವತಿ ಪೀಠ) ಇಲ್ಲಿ **ಕ್ರಿಮಿನಲ್ ಅಪೀಲ್ ಸಂಖ್ಯೆ-55/2019ರಂತೆ** ಮೇಲ್ಮನವಿ ಸಲ್ಲಿಸಿ, ನ್ಯಾಯಾಲಯ ದಿಂದ ಜಾಮೀನು ಪಡೆದುಕೊಂಡಿರುತ್ತಾರೆ.
- **ಪ್ರಕರಣ ಸಂಖ್ಯೆ -173/2016** ಆನೆಗೊಂದಿ ಹತ್ತರ ತೂಗು ಸೇತುವೆ ಬಾಕಿ ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸಲು Turn-key ಆಧಾರದಲ್ಲಿ ಗುತ್ತಿಗೆಯನ್ನು ಕಾರ್ಯಪಾಲಕ ಇಂಜಿನಿಯರ್, ಲೋಇ, ಕೊಪ್ಪಳ ಇವರು ಆಹ್ವಾನಿಸಿದ್ದು, ಈ ಗುತ್ತಿಗೆಯಲ್ಲಿ ಭಾಗವಹಿಸಿದ ಮೆ. ಬಿ.ವಿ. ರೆಡ್ಡಿ ಅಂಡ್ ಕಂಪನಿ ಇವರು ಕಾಮಗಾರಿಯನ್ನು ಪಡೆದುಕೊಳ್ಳಲು ನೀಡಿದ್ದ **Work done certificate** ನಕಲಿ ಎಂದು ರುಜುವಾತಾಗಿದ್ದು, ಸದರಿ ಗುತ್ತಿಗೆದಾರರ ವಿರುದ್ಧ **ದಿನಾಂಕ 18-10-2016ರಲ್ಲಿ** ಕಾರ್ಯಪಾಲಕ ಇಂಜಿನಿಯರ್, ಲೋಇ ವಿಭಾಗ, ಕೊಪ್ಪಳ ಇವರು ಪೊಲೀಸ್ ಇನ್ಸ್‌ಪೆಕ್ಟರ್, ನಗರ ಪೊಲೀಸ್ ಠಾಣೆ, ಕೊಪ್ಪಳ ಇವರಿಗೆ ದೂರು ನೀಡಿರುತ್ತಾರೆ, ಈ

ದೂರಿನನ್ವಯ ಸದರಿ ಗುತ್ತಿಗೆದಾರರ ವಿರುದ್ಧ 173/2016ರಂತೆ ಐಪಿಸಿ ಸೆಕ್ಷನ್ 465, 468, 467, 470, 420 ಅಡಿಯಲ್ಲಿ ದಾಖಲಾಗಿರುತ್ತದೆ. ನಂತರ ಈ ಪ್ರಕರಣದಡಿಯಲ್ಲಿ ಒಟ್ಟು 11 ಜನರ ವಿರುದ್ಧ ಮಾನ್ಯ ಸಿಜೆಎಂ ನ್ಯಾಯಾಲಯ, ಕೊಪ್ಪಳ ಇಲ್ಲಿ ದಿನಾಂಕ:02-07-2018ರಂದು ಚಾರ್ಜ್ ಶೀಟ್ ಸಲ್ಲಿಕೆಯಾಗಿರುತ್ತದೆ.

- ನ್ಯಾಯಾಲಯ ಪ್ರಕರಣ **ಸಿಸಿಸಂಖ್ಯೆ 219/2018ರಲ್ಲಿ** ವಿಚಾರಣೆ ನಡೆಸಿ 10-10-2018ರ ಆದೇಶದಲ್ಲಿ Perused, Charge sheet, cognizance is taken against the accused on A-1 to A-11 for the offence punishable under section 465, 468, 467, 470 & 420 of IPC. Register the case as criminal case. Issue NBW to A1-A11. Call on 29-12-2018. ತೀರ್ಪು ನೀಡಿರುತ್ತದೆ.
- ಈ ಪ್ರಕರಣದ ವಿಚಾರಣೆಯನ್ನು ದಿನಾಂಕ:24-10-2024ರಂದು ನಡೆದ ವಿಚಾರಣೆಯಲ್ಲಿ ಮಾನ್ಯ ನ್ಯಾಯಾಲವು ಆರೋಪಿ ನಂ1ರಿಂದ 5, 11 ಮತ್ತು 6, 7 ರವರಿಗೆ ಇಪಿ ಮೂಲಕ ಹಾಜರಾತಿ ವಿನಾಯಿತಿ ನೀಡಿರುತ್ತದೆ. ಆರೋಪಿ 6 ಮೃತ ಪಟ್ಟಿರುವ ಬಗ್ಗೆ ನೀಡಿರುವ ದಾಖಲೆಯನ್ನು ಅಂಗೀಕರಿಸಿರುತ್ತದೆ. ಆರೋಪಿ 9 ಮತ್ತು 10ನೇ ರವರ ವಿರುದ್ಧ ಹೊರಡಿಸಿದ ದಸ್ತಗಿರಿ ವಾರೆಂಟ್ ಜಾರಿಯಾಗದೇ ಇದ್ದುದರಿಂದ ಆರೋಪಿತ ವಿರುದ್ಧ ಉದ್ಘೋಷಣಾ ವರದಿ ಸಲ್ಲಿಸುವಂತೆ ಆದೇಶಿಸಿರುತ್ತದೆ.
- ಈ ಪ್ರಕರಣದ ಪ್ರಮುಖ ಆರೋಪಿಗಳ ನಿರೀಕ್ಷಣಾ ಜಾಮೀನು ರದ್ದು ಪಡಿಸಲು ಕ್ರಮ ಕೈಗೊಳ್ಳುವುದಾಗಿ ಕೊಪ್ಪಳ ಜಿಲ್ಲೆಯ ಪೊಲೀಸ್ ಅಧೀಕ್ಷಕರು ವರದಿ ನೀಡಿರುತ್ತಾರೆ.